# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 33/2022

| | | | |
|---|---|---|---|
| ಹೆಸರು | : | ಗೂಡುಸಾಬ ನಧಾಪ್ | ಪ್ರಾ.ಸಾ-3 |
| ತಂದೆಯ ಹೆಸರು | : | ಹುಸೇನಸಾಬ | ಚಾಸಾ-4 |
| ವಯಸ್ಸು | : | 38 ವರ್ಷ | |
| ಉದ್ಯೋಗ | : | ಪಂಚರ್ ಶಾಪ್ | |
| ವಿಳಾಸ | : | ಚಟ್ನಿಹಾಳ | |

ದಿಃ 07.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ಮೂರು ದಾಖಲಾತಿಗಳನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಗಳು ಜಪ್ತು ಪಂಚನಾಮೆಗಳಾಗಿದ್ದು, ಸಾಕ್ಷಿಯ ಸಹಿಯನ್ನು ಗುರುತಿಸುವ ಸಲುವಾಗಿ ಪಂಚನಾಮೆಗಳನ್ನು ನಿಶಾನೆ ಪಿ-6 ರಿಂದ 8 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಎ) ರಿಂದ ನಿಪಿ-8(ಎ) ಎಂದು ಗುರುತಿಸಲಾಯಿತು.

2. ಸುಮಾರು ಒಂದುವರೆ ವರ್ಷದ ಹಿಂದೆ ಬೆಳಿಗ್ಗೆ 9-30 ಗಂಟೆಗೆ ನಾನು ಇಲಕಲ್ಲಗೆ ಹೋಗುತ್ತಿದ್ದಾಗ ಪೊಲೀಸರು ನನ್ನನ್ನು ಮತ್ತು ಚಾಸಾ-5 ರವರನ್ನು ಕರೆದು ನಮ್ಮನ್ನು ಯಾವ ಗ್ರಾಮದ ವಾಸಿಗಳು ಎಂದು ವಿಚಾರಿಸಿದಾಗ ನಾನು ಮತ್ತು ಚಾಸಾ-5 ರವರು ಚಟ್ನಿಹಾಳ ಗ್ರಾಮದ ವಾಸಿಗಳು ಎಂದು ತಿಳಿಸಿರುತ್ತೇವೆ. ನಂತರ ಪೊಲೀಸರು ನಮ್ಮನ್ನು ಪಂಚನಾಮೆಗಾಗಿ ಇಲಕಲ್ಲ ಪೊಲೀಸ ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ಪೊಲೀಸ ಠಾಣೆಯಲ್ಲಿ ಮೃತ ಅಲ್ಲಾಸಾಬನ ಮೈಮೇಲಿನ ಬಟ್ಟೆಗಳಾದ ಅಂಡರವೇರ್, ಒಂದು ಬನಿಯನ್, ಶರ್ಟ ಮತ್ತು ಪ್ಯಾಂಟ ಪೊಲೀಸ ಪೇದೆ ರವರು ತಂದು ಹಾಜರುಪಡಿದ್ದು ಅವುಗಳನ್ನು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ನಿಪಿ-6 ರಂತೆ ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡು, ಭಾವಚಿತ್ರ ಗಳನ್ನುತೆಗೆದಿರುತ್ತಾರೆ. ಸಾಕ್ಷಿ ಎರಡು

ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ-9 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಮೃತ ಅಲ್ಲಾಸಾಬ ರವರ ಬಟ್ಟೆಗಳನ್ನು ನೋಡಿ ಗುರುತಿದ್ದು ಅವುಗಳನ್ನು ಮು ಮಾಲು-8 ರಿಂದ 11 ಎಂದು ಗುರುತಿಸಲಾಯಿತು.

3. ನಂತರ ಅದೇ ದಿನ ಆರೋಪಿತರಾದ ಗ್ಯಾನಪ್ಪ, ಚಂದ್ರಪ್ಪ ಹಾಗೂ ಹನಮಪ್ಪ ರವರು ಠಾಣೆಯಲ್ಲಿದ್ದು 1 ನೇ ಆರೋಪಿ ಗ್ಯಾನಪ್ಪ ಒಂದು ಲುಂಗಿ ಮತ್ತು ಒಂದು ಶರ್ಟ, 2 ನೇ ಆರೋಪಿ/ಚಂದ್ರಪ್ಪ ಒಂದು ಮುಂಡಾ ಮತ್ತು ಒಂದು ಧೋತರ ಹಾಗೂ 3 ನೇ ಆರೋಪಿ/ಹನಮಂತ ಒಂದು ಪ್ಯಾಂಟ ಮತ್ತು ಒಂದು ಶರ್ಟ ಹಾಜರುಪಡಿಸಿದ್ದು ಅವುಗಳನ್ನು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಪಂಚನಾಮೆ ಅಡಿಯಲ್ಲಿ ನಿಶಾನೆ ಪಿ-7 ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಎರಡು ಭಾವಚಿತ್ರಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಎರಡು ಭಾವಚಿತ್ರಗಳನ್ನುನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-10 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರ ಬಟ್ಟೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾಲು-12 ರಿಂದ 17 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಸುಮಾರು 12-30 ಗಂಟೆಗೆ ಜರುಗಿಸಿರುತ್ತಾರೆ.

4. ನಂತರ ಅದೇ ದಿನ ಪೊಲೀಸರು ಮತ್ತು 1 ನೇ ಆರೋಪಿ ರವರ ಜೊತೆಯಲ್ಲಿ ಮಲ್ಲಿಗೆಹಾಳ ಕ್ರಾಸ್ ಬಳಿ ಭೇಟಿ ನೀಡಿ, 1 ನೇ ಆರೋಪಿ ಜೀಪಿನಿಂದ ಇಳಿದು ಮಲ್ಲಗೆಹಾಳ ಕ್ರಾಸ್ ಬಳಿ ಇದ್ದ ಕಾಂಗ್ರೆಸ್ ಕಸದ ಗಿಡಗಳಲ್ಲಿ ಇದ್ದ ಸಲಾಕೆಯ ಕಾವನ್ನು ಎತ್ತಿಕೊಂಡು ಬಂದು ಹಾಜರುಪಡಿಸಿರುತ್ತಾರೆ. ನಂತರ ಪೊಲೀಸರು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಸಲಾಕೆಯ ಕಾವನ್ನು ನಿಪಿ-8 ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡು ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ಆ ಕಾಲಕ್ಕೆ ಪೊಲೀಸರು ಆರು ಭಾವಚಿತ್ರಗಳನ್ನು

ತೆಗೆಸಿರುತ್ತಾರೆ. ಸಾಕ್ಷಿ ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ-11 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಸಲಾಕೆಯ ಕಾವನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾಲು-18 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ** ಎಸ್ ಸಿ ಹೆಚ್ **ವಕೀಲರಿಂದ ಆರೋಪಿತರ ಪರ**

ನಾನು ಮತ್ತು ಚಾಸಾ-1 ರವರು ಸಂಬಂಧಿಕರು ಎಂದರೆ ಸರಿಯಲ್ಲ, ಆದರೆ ನಾವು ಒಂದೇ ಜಾತಿಗೆ ಸೇರಿದವರು. ಸದರಿ ಪಂಚನಾಮೆ ಜರುಗಿಸಲಾಗಿದೆ ಎಂದು ಹೇಳುವ ದಿನ ನಾನು ಇಲಕಲ್ಲಗೆ ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ . ಪೊಲೀಸರು ನನ್ನನ್ನು ಇಲಕಲ್ಲ ನಗರದಲ್ಲಿ ಭೇಟಿ ಆಗಿರುತ್ತಾರೆ. ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಬೆಳಿಗ್ಗೆ ಸುಮಾರು 9-30 ಗಂಟೆಗೆ ಇಲಕಲ್ಲ ಪೊಲೀಸ ಠಾಣೆಗೆ ಭೇಟಿ ನೀಡಿರುತ್ತೇನೆ. ನಾನು ಪೊಲೀಸ ಠಾಣೆಗೆ ಭೇಟಿ ನೀಡಿದಾಗ ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರು ಠಾಣೆಯಲ್ಲಿದ್ದರು. ನಾನು ಠಾಣೆಗೆ ಹೋದಾಗ ಆರೋಪಿತರು ಮುದ್ದೆ ಮಾಲು 12 ರಿಂದ 17 ಬಟ್ಟೆಗಳನ್ನು ಧರಿಸಿದ್ದು ಅವುಗಳನ್ನು ಪಂಚನಾಮೆ ಕಾಲದಲ್ಲಿ ತೆಗೆದುಕೊಟ್ಟಿರುತ್ತಾರೆ. ಬದಲಿ ಬಟ್ಟೆಗಳನ್ನು ಯಾರು, ಯಾವಾಗ ತಂದು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ದ್ವಿಚಕ್ರ ವಾಹನವನ್ನು ಠಾಣೆಯಲ್ಲಿಯೇ ನಿಲ್ಲಿಸಲಾಗಿತ್ತು . ನಾನು ನಿಪಿ-8 ಪಂಚನಾಮೆ ಕಾಲಕ್ಕೆ ನನ್ನ ದ್ವಿಚಕ್ರ ವಾಹನವನ್ನು ಠಾಣೆಯಲ್ಲಿ ನಿಲ್ಲಿಸಿ ಪೊಲೀಸ ವಾಹನದಲ್ಲಿ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಮಲ್ಲಿಗೆಹಾಳ ಕ್ರಾಸ್ ಬಳಿ ಇರುವ ರಸ್ತೆ ಕರಡಿ ಗ್ರಾಮಕ್ಕೆ ಹೋಗುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಹೆಚ್ಚಾಗಿ ವಾಹನಗಳ ಸಂಚಾರ ಇರುತ್ತದೆ ಎಂದರೆ ಸರಿ. ನಿಪಿ-11 ಭಾವಚಿತ್ರದಲ್ಲಿ ಜಪ್ತಿ ಪಡಿಸಿಕೊಳ್ಳಲಾಗಿದೆ ಎಂದು ಹೇಳುವ ಸ್ಥಳದ ಬಳಿ ಒಂದು ಶೆಡ್ ಇರುತ್ತದೆ ಎಂದರೆ ಸರಿ. ಸದರಿ ಸ್ಥಳದ ಬಳಿ ಕಾಲುದಾರಿ ಇದ್ದು ಜನರ ಓಡಾಟ ಇರುತ್ತದೆ ಎಂದರೆ ಸರಿ. ಸದರಿ ಭಾವಚಿತ್ರದಲ್ಲಿಸ್ಥಳದ ಬಳಿ ದಟ್ಟವಾದ

ಕಸ ಕಾಣಿಸುವುದಿಲ್ಲ ಎಂದರೆ ಸರಿ. ಮು ಮಾಲು-18 ಸಾಮಾನ್ಯವಾಗಿ ಎಲ್ಲ ರೈತರ ಮನೆಯಲ್ಲಿ ಸಿಗುತ್ತದೆ ಎಂದರೆ ಸರಿ. ಸದರಿ ದಿನ ನಾನು ಮಧ್ಯಾಹ್ನ 2 ಗಂಟೆಯವರೆಗೆ ಪೊಲೀಸರ ಜೊತೆ ಇದ್ದೆ. ಪೊಲೀಸರಿಗೆ ನಾನು ಪಂಚನಾಮೆಯಲ್ಲಿ ಬರೆದ ವಿಚಾರಗಳನ್ನು ತಿಳಿಸಿರುವುದಿಲ್ಲ.

2. ಪೊಲೀಸರು ನನ್ನನ್ನು ಠಾಣೆಗೆ ಕರೆಸಿರುವುದಿಲ್ಲ ಹಾಗೂ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ನಿಪಿ-6 ರಿಂದ 8 ರಂತೆ ಯಾವುದೇ ಜಪ್ತಿ ಪಂಚನಾಮೆಗಳನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಿನ ನಾನು ಚಾಸಾ-1 ರವರ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 33/2022

| | | | |
|---|---|---|---|
| ಹೆಸರು | : | ಮಲ್ಲಪ್ಪ ಕುರಿ | ಫ್ರಾ.ಸಾ-2 |
| ತಂದೆಯ ಹೆಸರು | : | ನಿಂಗಪ್ಪ | ಚಾಸಾ-2 |
| ವಯಸ್ಸು | : | 70 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಚಟ್ನಿಹಾಳ | |

ದಿಃ 07.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಗಳು ಶವ ಪಂಚನಾಮೆ ಮತ್ತು ಸ್ಥಳ ಪಂಚನಾಮೆಯಾಗಿದ್ದು ಸಾಕ್ಷಿಯ ಸಹಿಯನ್ನು ಗುರುತಿಸುವ ಸಲುವಾಗಿ ಪಂಚನಾಮೆಗಳನ್ನು ನಿಶಾನೆ ಪಿ-4 ಮತ್ತು 5 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಮತ್ತು ನಿಪಿ-5(ಎ) ಎಂದು ಗುರುತಿಸಲಾಯಿತು.

2. ಸುಮಾರು ಎರಡು ವರ್ಷಗಳ ಹಿಂದೆ ಅಲ್ಲಾಸಾಬ ಕೊಲೆಯಾದ ವಿಚಾರ ತಿಳಿದು ಆತನ ಮೃತದೇಹವನ್ನು ನೋಡಲು ಇಲಕಲ್ಲನ ಸರ್ಕಾರಿ ಆಸ್ಪತ್ರೆಗೆ ಮಧ್ಯಾಹ್ಣ ಸುಮಾರು 1 ಗಂಟೆಗೆ ಹೋಗಿದ್ದು, ಆ ಸಮಯದಲ್ಲಿ ಪೊಲೀಸರು ನನ್ನನ್ನು ಮತ್ತು ಚಾಸಾ-3 ರವರನ್ನು ಕರೆದು ಅಲ್ಲಾಸಾಬ ರವರ ಮೃತದೇಹದ ಮೇಲೆ ಶವ ಪಂಚನಾಮೆ ಜರುಗಿಸಬೇಕಾಗಿದೆ ಎಂದು ಹೇಳಿ, ನನ್ನ ಮತ್ತು ಚಾಸಾ-3/ಮಲ್ಲಪ್ಪ ರವರ ಸಮಕ್ಷಮ ಶವ ಪಂಚನಾಮೆಯನ್ನು ಜರುಗಿಸಿ, ಅದರಲ್ಲಿ ಬರೆದಿರುವ ವಿಚಾರಗಳನ್ನು ಓದಿ ಹೇಳಿ ಅದಕ್ಕೆ ನನ್ನ ಮತ್ತು ಚಾಸಾ-3 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಅದೇ ಸಮಯಕ್ಕೆ ಭಾವಚಿತ್ರಗಳನ್ನು ಸಹ ಪೊಲೀಸರು ತೆಗೆಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ.

3. ನಂತರ ಪೊಲೀಸರು ಚಾಸಾ-1/ಮುರ್ತುಜಸಾಬ ರವರನ್ನು ಕೊಲೆ ಆದ ಸ್ಥಳವನ್ನು ವಿಚಾರಿಸಿದಾಗ ಚಾಸಾ-1 ರವರು 1 ಮತ್ತು 2 ನೇ ಆರೋಪಿ ಮನೆ ಎಂದು ತಿಳಿಸಿರುತ್ತಾರೆ. ನಂತರ ಪೊಲೀಸರ ಜೊತೆಯಲ್ಲಿ ನಾವೆಲ್ಲರೂ 1 ಮತ್ತು 2 ನೇ ಆರೋಪಿ ಮನೆಗೆ ಭೇಟಿ ನೀಡಿದ್ದು, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪೊಲೀಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ, ಮೂರು ಕಡೆ ಬಿದ್ದ ರಕ್ತದ ಮಾದರಿ, ಎರಡು ಕಟ್ಟಿಗೆ, ಒಂದು ವಾಚ್, ಒಂದು ಬೆಳ್ಳಿ ಉಂಗುರ ಹಾಗೂ ಒಂದು ಜೊತೆ ಚಪ್ಪಲಿಯನ್ನು ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡು, ಪಂಚನಾಮೆಯಲ್ಲಿ ಬರೆದ ವಿಚಾರಗಳನ್ನು ನಮಗೆ ಓದಿ ಹೇಳಿ ಅದಕ್ಕೆ ನನ್ನ ಮತ್ತು ಚಾಸಾ-3 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆ ಕಾಲದಲ್ಲಿ ನಾಲ್ಕು ಭಾವಚಿತ್ರಗಳನ್ನು ತೆಗೆಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗೇ ನಿಪಿ-3 ಎಂದು ಗುರುತಿಸಲಾಗಿದೆ. ನಮ್ಮ ಸಮಕ್ಷಮ ಜಪ್ತಿ ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ವಸ್ತುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾಲು-1 ರಿಂದ 7 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಶ್ರೀ** ಎಸ್ ಸಿ ಹೆಚ್ **ವಕೀಲರಿಂದ ಆರೋಪಿತರ ಪರ**

ಅಲ್ಲಾಸಾಬ ರವರ ಮೃತದೇಹವನ್ನು ನೋಡಲು ಇಲಕಲ್ಲನ ಸರ್ಕಾರಿ ಆಸ್ಪತ್ರೆಗೆ ನಮ್ಮ ಊರಿನ ಹಲವು ಜನರು ಹೋಗಿದ್ದೆವು. ಸದರಿ ಸಮಯದಲ್ಲಿ ಪೊಲೀಸರಿಗೆ ನಾನು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಪೊಲೀಸರು ನನಗೆ ಸಹಿ ಮಾಡಲು ಹೇಳಿದ್ದರಿಂದ ನಾನು ಶವ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

2. ಇಲಕಲ್ಲನ ಸರ್ಕಾರಿ ಆಸ್ಪತ್ರೆಯಿಂದ ನಾನು,ಚಾಸಾ-1, ಚಾಸಾ-3 ರವರು 1 ಮತ್ತು 2 ನೇ ಆರೋಪಿತರ ಮನೆಗೆ ಪೊಲೀಸ ವಾಹನದಲ್ಲಿ ಬಂದಿರುತ್ತೇವೆ. ಆ ಸಮಯದಲ್ಲಿ

1 ಮತ್ತು 2 ನೇ ಆರೋಪಿತರ ಮನೆಯಲ್ಲಿ ಯಾರೂ ಇರಲಿಲ್ಲ ಮತ್ತು ಮನೆಯ ಬಾಗಿಲಿಗೆ ಕೊಂಡಿ ಹಾಕಲಾಗಿತ್ತು. ಮನೆಯ ಹೊರಗೆ ಊರಿನವರು ಇದ್ದರು. 1 ಮತ್ತು 2 ನೇ ಆರೋಪಿತರ ಮನೆ ಸಣ್ಣ ಮನೆಯಾಗಿದ್ದು, ಮೊದಲಿಗೆ ದನ ಕಟ್ಟಲು ಕೊಟ್ಟಿಗೆ ಇದ್ದು ಮುಂದೆ ಹಾಲ್ ಮತ್ತು ಅಡುಗೆ ಕೋಣೆ ಇರುತ್ತದೆ ಎಂದರೆ ಸರಿ. ಮನೆಯ ಮುಖ್ಯ ದ್ವಾರದಿಂದ ಅಡುಗೆ ಮನೆ ಕಾಣಿಸುತ್ತದೆ ಎಂದರೆ ಸರಿ. ಕೊಟ್ಟಿಗೆಯಲ್ಲಿ ದನಗಳಿಗೆ ಮೇವು ಹಾಕಲು ಗೋದಲಿ ಮಾಡಲಾಗಿದೆ ಎಂದರೆ ಸರಿ. ಗೋದಲಿ ಕೆಳಭಾಗದಲ್ಲಿ ದನಕಟ್ಟಲು ಕಬ್ಬಿಣದ ರಿಂಗ್ ಗಳು ಇರುತ್ತವೆ ಎಂದರೆ ಸರಿ. ಸದರಿ ಗೋದಲಿ ಪಕ್ಕದಲ್ಲಿ ಮಲಗಿಕೊಳ್ಳಲು ಒಂದು ಕಾಟ್ ಇರುತ್ತದೆ. ಕೊಟ್ಟಿಗೆಯಲ್ಲಿ ಕಾಟ್ ಹಾಕಿದ್ದರಿಂದ ಓಡಾಡಲು ಸ್ಥಳ ಇರುವುದಿಲ್ಲ ಎಂದರೆ ಸರಿ. ಸದರಿ ಕೊಟ್ಟಿಗೆಯಲ್ಲಿ 3-4 ಜನ ನಿಂತುಕೊಳ್ಳಲು ಮಾತ್ರ ಸ್ಥಳ ಇರುತ್ತದೆ ಎಂದರೆ ಸರಿ.

3. 2 ನೇ ಆರೋಪಿ ಚಂದ್ರಪ್ಪ, 3 ನೇ ಆರೋಪಿ ಹನಮಪ್ಪ ಮತ್ತು 4 ನೇ ಆರೋಪಿ ದ್ಯಾವಪ್ಪ ರವರಿಗೆ ಪ್ರತ್ಯೇಕವಾಗಿ ಮನೆ ಇರುತ್ತದೆ ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳುವ ಮನೆಯಲ್ಲಿ 1 ನೇ ಆರೋಪಿ ಮತ್ತು ಚಾಸಾ-6 ಹಾಗೂ ಅವರ ಮಕ್ಕಳು ಮಾತ್ರ ವಾಸವಾಗಿದ್ದರು ಎಂದರೆ ಸರಿ. 2 ನೇ ಆರೋಪಿಯ ಮನೆ 1 ನೇ ಆರೋಪಿ ಮನೆಯಿಂದ ಸುಮಾರು 400-500 ಮೀಟರ ಅಂತರದಲ್ಲಿ ಇರುತ್ತದೆ ಎಂದರೆ ಸರಿ. 2 ನೇ ಆರೋಪಿ ಮನೆಯಿಂದ 1 ನೇ ಆರೋಪಿ ಮನೆಯಲ್ಲಿ ನಡೆಯುವ ಘಟನೆ ಕಾಣಿಸುವುದಿಲ್ಲ ಹಾಗೂ ಕೇಳಿಸುವುದಿಲ್ಲ ಎಂದರೆ ಸರಿ. ಪಂಚನಾಮೆ ಕಾಲದಲ್ಲಿ ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ.

4. ಪೊಲೀಸರು ನನ್ನ ಸಮಕ್ಷಮ ಯಾವುದೆ ಶವ ಪಂಚನಾಮೆ ಹಾಗೂ ಸ್ಥಳ ಪಂಚನಾಮೆ ಜರುಗಿಸಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿ

ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಿನ ನಾನು ಚಾಸಾ-1 ರವರ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 33/2022

| | | | |
|---|---|---|---|
| ಹೆಸರು | : | ಮುರ್ತುಜಸಾಬ ನಧಾಫ್ | ಫ್ರಾ.ಸಾ-1 |
| ತಂದೆಯ ಹೆಸರು | : | ಹುಸೇನಸಾಬ | ಚಾಸಾ-1 |
| ವಯಸ್ಸು | : | 37 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಚಟ್ನಿಹಾಳ | |

ದಿಃ 07.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ಮೃತ ಅಲ್ಲಾಸಾಬ ನನ್ನ ತಮ್ಮ. ಆತನು ಜೀವಂತವಾಗಿದ್ದಾಗ ಜೆ.ಜಿ.ಬಿ ಚಾಲಕನಾಗಿ ಕುಕನೂರಿನಲ್ಲಿ ಕೆಲಸ ಮಾಡುತ್ತಿದ್ದು ಊರಿಗೆ ಆಗಾಗ ಬಂದು ಹೋಗುತ್ತಿದ್ದ. ಚಾಸಾ-10/ಹುಸೇನಸಾಬ ನನ್ನ ತಂದೆ. ಚಾಸಾ-11/ಹುಸೇನಬಿ ನನ್ನ ತಾಯಿ. ಚಾಸಾ-13/ಮುಮ್ತಾಜಬೇಗಂ ನನ್ನ ಅಕ್ಕ. ಚಾಸಾ-12/ಹಜರತಬಿ ನನ್ನ ಚಿಕ್ಕಮ್ಮ. ನಮ್ಮ ಮನೆಯಲ್ಲಿ ನಾನು ಮತ್ತು ಚಾಸಾ-10 ರಿಂದ 13 ಒಟ್ಟಾಗಿ ವಾಸವಾಗಿದ್ದೆವು. ನ್ಯಾಯಾಲಯದ ಮುಂದಿರುವ ಆರೋಪಿತರಾದ ಗ್ಯಾನಪ್ಪ ಪೂಜಾರಿ, ಚಂದ್ರಪ್ಪ ಪೂಜಾರಿ, ಹನಮಪ್ಪ ಪೂಜಾರಿ, ದ್ಯಾವಪ್ಪ ಪೂಜಾರಿ ನನಗೆ ಗೊತ್ತು, ಅವರು ನಮ್ಮ ಊರಿನ ವಾಸಿಗಳು. ಚಾಸಾ-6/ರೇಣುಕಾ ಇವಳು 1 ನೇ ಆರೋಪಿತನ ಹೆಂಡತಿ.

2. ನನ್ನ ತಮ್ಮ ಅಲ್ಲಾಸಾಬ ಹಾಗೂ 1 ನೇ ಆರೋಪಿತನ ಹೆಂಡತಿ ಚಾಸಾ-6/ರೇಣುಕಾ ರವರಿಗೆ ಅನೈತಿಕ ಸಂಬಂಧ ಇತ್ತು. ಈ ವಿಚಾರವಾಗಿ ನಾನು ಮತ್ತು ನಮ್ಮ ಕುಟುಂಬದವರು ನನ್ನ ತಮ್ಮ ಅಲ್ಲಾಸಾಬ ರವರಿಗೆ ಬುದ್ಧಿವಾದ ಹೇಳಿದ್ದೆವು. ನಮ್ಮ ಬುದ್ಧಿವಾದ ಕೇಳಿ ನನ್ನ ತಮ್ಮ ಅಲ್ಲಾಸಾಬ ಊರನ್ನು ಬಿಟ್ಟು ಕೂಕನೂರಿಗೆ ಕೆಲಸ ಮಾಡಲು ಹೋಗಿ, ಯಾವಗಲಾದರೊಮ್ಮೆ ಊರಿಗೆ ಬರುತ್ತಿದ್ದನು.

3. ಸುಮಾರು ಒಂದುವರೆ ವರ್ಷದ ಹಿಂದೆ ರಾತ್ರಿ 8-30 ಗಂಟೆಗೆ ನನ್ನ ತಮ್ಮ ಅಲ್ಲಾಸಾಬ ನಮ್ಮ ಊರಿನಲ್ಲಿರುವ ಮನೆಗೆ ಬಂದಿದ್ದನು. ನಾನು ಅಲ್ಲಾಸಾಬನಿಗೆ ಊಟ ಮಾಡಲು ಕರೆದಾಗ, ಆತನಿಗೆ ಒಂದು ಫೋನ ಕಾಲ್ ಬಂದಿದ್ದು ಆತ ಮಾತನಾಡಿಕೊಂಡು ಮನೆಯಿಂದ ಹೊರಗೆ ಹೋದನು. ನಾನು ಮನೆಯಲ್ಲಿ ಊಟ ಮಾಡಿಕೊಂಡು ಮಲಗಿಕೊಂಡಿರುತ್ತೇನೆ. ನಂತರ ರಾತ್ರಿ 9-30 ರಿಂದ 10 ಗಂಟೆ ಸಮಯದಲ್ಲಿ ನನ್ನ ಅಳಿಯಂದಿರಾದ ಚಾಸಾ-14/ರಂಜಾನಸಾಬ ಹಾಗೂ ಚಾಸಾ-15/ಜಾಫರ್ ಬಂದು ನನ್ನ ತಮ್ಮ ಅಲ್ಲಾಸಾಬನನ್ನು 2 ನೇ ಆರೋಪಿ/ಚಂದ್ರಪ್ಪ ರವರ ಮನೆಯಲ್ಲಿ ಆರೋಪಿತರೆಲ್ಲರೂ ಸೇರಿ ಹೊಡೆಯುತ್ತಿದ್ದಾರೆ ಎಂದು ತಿಳಿಸಿದರು. ಈ ವಿಚಾರ ತಿಳಿದು ನಾನು ಮತ್ತು ನಮ್ಮ ಕುಟುಂಬದವರೆಲ್ಲರೂ 2 ನೇ ಆರೋಪಿ ಮನೆಯ ಬಳಿ ಹೋಗಿ ನೋಡಿದಾಗ, 2 ನೇ ಆರೋಪಿ ಮನೆಯ ಬಾಗಿಲನ್ನು ಒಳಗಿನಿಂದ ಹಾಕಿ ನನ್ನ ತಮ್ಮನನ್ನು ಹೊಡೆಯುತ್ತಿದ್ದ ಶಬ್ಧ ಕೇಳಿ ಬಂದಿತು. ಆಗ ನಾವು ಬಾಗಿಲನ್ನು ಬಡೆದು ತೆಗೆಯಲು ಹೇಳಿದರೂ ಸಹ ಅವರು ಬಾಗಿಲು ತೆಗೆಯಲಿಲ್ಲ. ನಂತರ ನಾವು ಮನೆಯ ಕಿಟಕಿಯಿಂದ ನೋಡಿದಾಗ ಆರೋಪಿತರು ಹಾಗೂ ಇನ್ನೂ 4 ಜನ ಸೇರಿ ನನ್ನ ತಮ್ಮನನ್ನು ಹೊಡೆಯುತ್ತಿದ್ದು ಏ ಬೋಸಡಿ ಮಗನಾ ನಿಮ್ಮ ಹೆಣ್ಣಮಕ್ಕಳಿಗೆ ಮಾಡಿದರೆ ಸುಮ್ಮನಿರುತ್ತಿದ್ದೀರಾ ಮಕ್ಕಳೆ ಎಂದು ಅವಾಚ್ಯ ಶಬ್ಧಗಳಿಂದ ಬೈಯುತ್ತಿದ್ದರು. ನಾವು ಕಿಟಕಿಯಿಂದ ಆರೋಪಿತರಿಗೆ ನನ್ನ ತಮ್ಮನಿಗೆ ಬುದ್ದಿ ಹೇಳುತ್ತೇವೆ ಎಂದು ಹೇಳಿದರೂ ಸಹ ಕೇಳಲಿಲ್ಲ. ಅದೇ ಸಮಯದಲ್ಲಿ 1 ನೇ ಆರೋಪಿ ಸಲಾಕೆಯ ಕಾವಿನಿಂದ ನನ್ನ ತಮ್ಮನ ಮುಖಕ್ಕೆ ಹೊಡೆದನು. 2 ಮತ್ತು 3 ನೇ ಆರೋಪಿತರು ಕಟ್ಟಿಗೆಯಿಂದ ನನ್ನ ತಮ್ಮನ ಮೈಮೇಲೆ ಹೊಡೆಯುತ್ತಿದ್ದರು. ಉಳಿದವರು ಕೈಗಳಿಂದ ಮತ್ತು ಕಾಲಿನಿಂದ ಹೊಡಿಬಡಿ ಮಾಡಿರುತ್ತಾರೆ. ಅದೇ ಸಮಯಕ್ಕೆ ಪೊಲೀಸ್ ವ್ಯಾನ್ ಸೈರನ್ ಹಾಕಿಕೊಂಡು ಬಂದಾಗ ಆರೋಪಿತರು ಹಾಗೂ ಇನ್ನುಳಿದ 4 ಜನ ಮನೆಯ ಬಾಗಿಲನ್ನು ತೆಗೆದು ಓಡಿ ಹೋಗಿರುತ್ತಾರೆ. ನಂತರ ನಾವು ಒಳಗೆ ಹೋಗಿ ನೋಡಲಾಗಿ ನನ್ನ ತಮ್ಮನಿಗೆ ತೀವ್ರವಾದ ಪೆಟ್ಟುಗಳಾಗಿ ಸತ್ತು ಬಿದ್ದಿದ್ದನು. ನಂತರ ಪೊಲೀಸರು ದೂರು ದಾಖಲಿಸಲು ತಿಳಿಸಿದರು

ಆದರೆ ನನಗೆ ಗಾಬರಿಯಾಗಿದ್ದರಿಂದ ಆ ಸಮಯಕ್ಕೆ ದೂರು ದಾಖಲಿಸಲು ಆಗಲಿಲ್ಲ. ಮರುದಿನ ಹಿರಿಯರನ್ನು ಸಂಪರ್ಕಿಸಿ ನಂತರ ಆರೋಪಿತರ ವಿರುದ್ಧ ಬೆಳಿಗ್ಗೆ 11 ಗಂಟೆಗೆ ಚಾಸಾ-17 ರವರಿಂದ ನಾನು ಹೇಳಿದಂತೆ ಗಣಕೀಕೃತ ಮಾಡಿಸಿ, ದೂರು ದಾಖಲಿಸಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಶಾನೆ ಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

4. ದೂರು ದಾಖಲಿಸಿದ ನಂತರ ನನ್ನ ತಮ್ಮನ ಮೃತದೇಹವನ್ನು ಇಲಕಲ್ಲನ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ ಪೊಲೀಸರು ನನ್ನ ಸಮಕ್ಷಮ ಶವ ಪಂಚನಾಮೆ ಜರುಗಿಸಿರುತ್ತಾರೆ. ಅದೇ ಸಮಯಕ್ಕೆ ಪೊಲೀಸರು 10 ಭಾವಚಿತ್ರ ಗಳನ್ನುಸಹ ತೆಗೆಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಭಾವಚಿತ್ರ ಗಳನ್ನುನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ-2 ಎಂದು ಗುರುತಿಸಲಾಯಿತು.

5. ಅದೇ ದಿನ ಪೊಲೀಸರ ಜೊತೆಯಲ್ಲಿ 2 ನೇ ಆರೋಪಿ ಮನೆಗೆ ಭೇಟಿ ನೀಡಿ ನಾನು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ, ಪಂಚನಾಮೆ ಕಾಲದಲ್ಲಿ ಸ್ಥಳದಲ್ಲಿ ಮೂರು ಕಡೆ ಬಿದ್ದಿದ್ದ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಕಿಟಕಿಯ ಬಳಿ ಬಿದ್ದ ನನ್ನ ತಮ್ಮನ ವಾಚ್, ಸ್ಥಳದಲ್ಲಿ ಬಿದ್ದಿದ್ದ ಒಂದು ಬೆಳ್ಳಿಯ ಉಂಗುರ, ಪಡಸಾಲೆಯಲ್ಲಿ ಬಿದ್ದಿದ್ದ ಎರಡು ಕಟ್ಟಿಗೆಗಳನ್ನು ಹಾಗೂ ನನ್ನ ತಮ್ಮನ ಒಂದು ಜೊತೆ ಚಪ್ಪಲ್ ನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಅದೇ ಸಮಯಕ್ಕೆ ಭಾವಚಿತ್ರ ಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 4 ಭಾವಚಿತ್ರ ಗಳನ್ನುನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ-3 ಎಂದು ಗುರುತಿಸಲಾಯಿತು. ಸಾಕ್ಷಿ ಪಂಚನಾಮೆ ಕಾಲದಲ್ಲಿ ಜಪ್ತಿಪಡಿಸಿಕೊಂಡಿರುವ ವಸ್ತುಗಳನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾಲು-1 ರಿಂದ 7 ಎಂದು ಗುರುತಿಸಲಾಯಿತು.

6. ನಾನು ದೂರು ದಾಖಲಿಸುವ ಸಮಯದಲ್ಲಿ ಕರೆಪ್ಪ ಬಾಳಪ್ಪ ಪೂಜೇರಿ, ಹನಮಪ್ಪ ಕರೆಪ್ಪ ಪೂಜಾರಿ ರವರ ಹೆಸರುಗಳನ್ನು ಬರೆದಿರಲಿಲ್ಲ. ಈ ಕಾರಣದಿಂದ ಪೊಲೀಸರಿಗೆ ನನ್ನ ಮರು ಹೇಳಿಕೆಯಲ್ಲಿ ಅವರುಗಳ ಹೆಸರುಗಳನ್ನು ಸಹ ತಿಳಿಸಿರುತ್ತೇನೆ.

7. 2 ನೇ ಆರೋಪಿ ರವರ ಮನೆಗೆ ಸೇರಿದಂತೆ ಮೂರು ಕಿಟಕಿಗಳು ಇರುತ್ತವೆ. ನಾನು ಘಟನೆಯನ್ನು ಮಲ್ಲಿಗೆಹಾಳ ಕಡೆಗೆ ಹೋಗುವ ರಸ್ತೆಯ ಬದಿಯ ಬಳಿ ಬರುವ ಕಿಟಕಿಯಿಂದ ನೋಡಿರುತ್ತೇನೆ. ನನ್ನ ತಮ್ಮ ಅಲ್ಲಾಸಾಬನ ವೇಲೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ರಿಂದ 4 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಇನ್ನುಳಿದ 4 ಜನ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ**

**(ಆರೋಪಿತರ ಪರ ವಕೀಲರು ಅರ್ಜಿ ಸಲ್ಲಿಸಿ ಸಾಕ್ಷಿಯನ್ನು ಚಾಸಾ-6 ರಿಂದ 16 ರವರ ಮುಖ್ಯ ವಿಚಾರಣೆ ಆದ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿ ಅರ್ಜಿ ಸಲ್ಲಿಸಿದ್ದು, ಅದನ್ನು ಪುರಸ್ಕರಿಸಿ, ಪಾಟೀ ಸವಾಲನ್ನು ಮುಂದೂಡಲಾಯಿತು)**.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.